ಈ) ಈ ಕೆಳಗೆ ನಮೂದಿಸಿರುವ ಪ್ರಮಾಣವನ್ನು ಬೀಜೋತ್ಪಾದನೆಯಡಿಯಲ್ಲಿ ಹಾಗೂ ನೇರವಾಗಿ ಖರೀದಿಸಲಾಗಿದೆ.

ವರ್ಷ	ಬೀಜೋತ್ಪಾದನೆ ಯಡಿಯಲ್ಲಿ ಖರೀದಿಸಿದ ಪ್ರಮಾಣ	ನೇರವಾಗಿ ಖರೀದಿಸಿದ ಪ್ರಮಾಣ	ಒಟ್ಟು ಪ್ರಮಾಣ
	ಪ್ರಮಾಣ ಕ್ವಿಂಟಾಲ್‌ಗಳಲ್ಲಿ		
೧೯೮೭-೮೮	೬,೩೬೨.೫೦	೧,೩೫೯.೯೦	೭,೭೨೨,೪೦
೧೯೮೮-೮೯	೪,೬೩೧.೫೧	೫೯೭.೧೪	೧೦,೨೨೮.೬೫
೧೯೮೯-೯೦	೩೩೮.೯೫	—	೩೩೮.೯೫
ಒಟ್ಟು	೧೧,೩೩೨.೯೬	೭,೩೫೭.೦೪	೧೮,೬೯೦.೦೦

ನೇರವಾಗಿ ಖರೀದಿಸುವುದಕ್ಕೆ ಈ ಕೆಳಕಂಡ ಕಾರ್ಯ ವಿಧಾನವನ್ನು ಅನುಸರಿಸಲಾಯಿತು.

೧) ಕೃಷಿ ಇಲಾಖೆಯ ಮುಖಾಂತರ ನಿಜ ಬೀಜವನ್ನಾಗಿ, ಯೋಗ್ಯವುಳ್ಳ ಬೀಜವು ದೊರೆಯುವ ಮೂಲ ಸ್ಥಾನವನ್ನು ಕೃಷಿ ಇಲಾಖೆಯ ಮುಖಾಂತರ ಗುರುತಿಸಿ ಹಾಗೂ ಅವರಿಂದ ಅದಕ್ಕೆ ದ ಢೀಕರಣ ಪತ್ರವನ್ನು ಪಡೆಯಲಾಯಿತು. ಗುರುತಿಸಲ್ಪಟ್ಟ ರೈತರ ಬೀಜಗಳನ್ನು ಸರಿಯಾದ ರೀತಿಯಲ್ಲಿ ನಿಯಮಾವಳಿ ಪ್ರಕಾರ ಸಂಸ್ಕರಿಸಿ, ಮೊಳೆಯುವಿಕೆಯ ಶುದ್ಧತೆ ಹಾಗೂ ತೇವಾಂಶಗಳ ಪರೀಕ್ಷೆಯನ್ನು ಮಾಡಿಸಿ ನಂತರ ಖರೀದಿಸಲಾಯಿತು.

೨) ಪ್ರಮಾಣಿತ ಬೀಜವನ್ನು ಪ್ರಮಾಣೀಕರಿಸಲು ಇರಬೇಕಾದ ಕನಿಷ್ಠ ಶುದ್ಧತೆ ತೇವಾಂಶ ಹಾಗೂ ಮೊಳೆಯುವಿಕೆಯ ಪ್ರಮಾಣಪಟ್ಟವ್ಯತ್ಯಾಸ ಬೀಜಗಳನ್ನು ಮಾತ್ರ ಖರೀದಿಸಲಾಯಿತು.

೩) ನೇರವಾಗಿ ಖರೀದಿಸಿದ ಪೂರ್ಣ ಪ್ರಮಾಣದ ಸೂರ್ಯಕಾಂತಿ ಬೀಜಗಳನ್ನು ವಿಲೇವಾರಿ ಮಾಡಲಾಗಿದೆ.

೪) ಈ ವಹಿವಾಟಿನಲ್ಲಿ ನಿಗಮಕ್ಕೆ ಯಾವುದೇ ರೀತಿಯ ನಷ್ಟವಾಗಿಲ್ಲವುದಿಲ್ಲ.

೫) ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಉತ್ಪನ್ನಗಳ ಬೆಲೆ ನಿಗದಿ ನೀತಿಯ ಬಗ್ಗೆ

೩೪೪. ಪ್ರೋ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ).— ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆ ಇದುವರೆಗೆ ಕೃಷಿ ಉತ್ಪನ್ನಗಳ ಬೆಲೆ ನಿಗದಿ ಮಾಡಲು ಅನುಸರಿಸಿದ ವಿಧಾನ ಏನು ?

ಆ) ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಯತ್ನಿಸುತ್ತಿರುವ ಸುಧಾರಣೆಗಳ ಬಗ್ಗೆ ರಾಜ್ಯ ಸರ್ಕಾರ ಕೂಡ ಏನಾದರೂ ಕ್ರಮ ತೆಗೆದುಕೊಳ್ಳಲು ಯೋಚಿಸಿದೆಯೆ ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಸಚಿವರು).—

ಅ) ರಾಜ್ಯ ಕೃಷಿ ಇಲಾಖೆಯಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಕೃಷಿ ಉತ್ಪನ್ನಗಳ ಬೆಲೆಯನ್ನು ನಿಗದಿಪಡಿಸುತ್ತಿಲ್ಲ. ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರದ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಕೇಳುವ ಮಾಹಿತಿಯನ್ನು ಸಲಹೆಯೊಂದಿಗೆ ರಾಜ್ಯ ಸರ್ಕಾರವು ಒದಗಿಸುತ್ತಿದೆ. ಕೇಂದ್ರ ಸರ್ಕಾರವು ಅಂತಿಮವಾಗಿ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಬೆಂಬಲ ಬೆಲೆಯನ್ನು ನಿರ್ಧಾರ ಮಾಡುವುದು.

ಆ) ಕೇಂದ್ರ ಸರ್ಕಾರವು ರಚಿಸಿದ ಸಮಿತಿಯು ಶಿಫಾರಸ್ಸುಗಳು ರಾಜ್ಯ ಸರಕಾರಕ್ಕೆ ಇನ್ನೂ ಬಂದಿರುವುದಿಲ್ಲ.